ಇದೊಂದು ಸಿನಿಮೀಯ ಕತೆಯೆಂದು ನಿಮಗನಿಸಿದರೆ ನಾನೇನೂ ಮಾಡುವಂತಿಲ್ಲ. ನನಗೂ ಮೊದಮೊದಲು ಹಾಗೆಯೇ ಅನಿಸಿ ಬರೆಯಲಾಗದೇ ಚಡಪಡಿಸಿದ್ದೆ. ಆದರೆ ಅದು ನಿಜವಾಗಿಯೂ ಘಟಿಸಿತು ಎಂಬುದು ನನ್ನ ಸ್ಮೃತಿಯಲ್ಲಿ ಅಚ್ಚಾಗಿರುವಾಗ ಬರೆಯದೇ ಇರುವುದು ಸಾಧ್ಯವೇ ಇಲ್ಲವೆನಿಸಿ ಬರೆಯುತ್ತಿದ್ದೇನೆ. ಹಾಗೆಂದು ಇದೇನು ಹೇಳಿಕೊಳ್ಳುವಂತಹ ಚಾರಿತ್ರಿಕ ಘಟನೆಯೇನೂ ಆಗಿರಲಿಕ್ಕಿಲ್ಲ. ಆದರೆ ಒಂದು ಬಿಡುಗಡೆಯ ಕಥಾನಕವಂತೂ ಹೌದು. ಬಂಧನವೆನ್ನುವುದು ಯಾವೆಲ್ಲ ರೂಪದಲ್ಲಿ ಬದುಕಿನಲ್ಲಿ ನುಸುಳಿಬಿಡಬಹುದು ಮತ್ತು ಅದನ್ನು ಗುರುತಿಸಿ ನಿವಾರಿಸಿಕೊಳ್ಳುವುದು ಎಷ್ಟು ಕಷ್ಟ ಎಂಬುದರ ಅರಿವಿರುವ ನನಗೆ ಇಂತಹ ಘಟನೆಗಳೆಲ್ಲವೂ ಚಾರಿತ್ರಿಕವೇ ಅನಿಸಿಬಿಡುತ್ತವೆಯೇನೊ?

ರ್‍ಯಾಂಕ್‌ನೊಂದಿಗೆ ತಾಂತ್ರಿಕ ಶಿಕ್ಷಣವನ್ನು ಮುಗಿಸಿ, ಪ್ರಸಿದ್ಧವಾದ ಅಂತರರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಗಿಟ್ಟಿಸಿಕೊಂಡಾಗ ನನಗೆರಡು ರೆಕ್ಕೆಗಳು ಬಂದಂತೆ ಸಂಭ್ರಮಿಸಿದ್ದೆ. ಹಾರಲು ಆಗಸವಿಲ್ಲದ ಜಾಗದಲ್ಲಿ ರೆಕ್ಕೆಗಳಿಂದ ಏನೂ ಉಪಯೋಗವಿಲ್ಲವೆಂದು ಅರಿವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ಅವಶ್ಯಕತೆಯಿಲ್ಲದ ರೆಕ್ಕೆಗಳನ್ನು ಹೊತ್ತು ತಿರುಗುವುದೊಂದು ಕಷ್ಟ ಎನಿಸತೊಡಗಿತು. ಸಾರ್ಥಕತೆಯನ್ನು ಮೂಡಿಸುತ್ತಿದ್ದ ಬ್ಯಾಂಕ್ ಬ್ಯಾಲೆನ್ಸ್ ಕ್ರಮೇಣವಾಗಿ ಆಕರ್ಷಣೆಯನ್ನು ಕಳಕೊಳ್ಳತೊಡಗಿತು. ಜರ್ಮನಿಯಿಂದ ಬಂದ ಲೋರೆಯ ಒಡನಾಟ ಆಸಕ್ತಿದಾಯಕವೆನಿಸತೊಡಗಿತು. ಪ್ರಾಜೆಕ್ಟ ಮ್ಯಾನೇಜರ್ ಆಗಿ ಬಂದ ಲೋರೆ ಬಿಡುವಿನ ವೇಳೆಯಲ್ಲೆಲ್ಲಾ ಪುಸ್ತಕದಲ್ಲಿ ಮುಖ ತೂರಿಸಿರುತ್ತಿದ್ದರು. ಆಸಕ್ತಿಯಿಂದ ನಾನೂ ತಂದು ಓದುತ್ತಿದ್ದ ಆ ಪುಸ್ತಕಗಳು ಮುಂದೆ ಇಬ್ಬರಿಗೂ ದಾರಿದೀಪಗಳಾದವು. ಹೀಗೆ ಒಂದು ದಿನ ಲೋರೆ ಅವರ ದೇಶದ ಯುನಿವರ್ಸಿಟಿಯೊಂದಕ್ಕೆ ಸಂಶೋಧನಾ ಕಾರ್ಯಕ್ಕೆಂದು ಅರ್ಜಿ ಸಲ್ಲಿಸಿ, ಅವರಿಂದ ಪೂರಕ ಪ್ರತಿಕ್ರಿಯೆಯೂ ಬಂದು, ನಾವಿಬ್ಬರೂ ಅಲ್ಪ ಆದಾಯದ ಮಿತಿಗೆ ನಮ್ಮ ಅವಶ್ಯಕತೆಗಳನ್ನು ಸೀಮಿತಗೊಳಿಸಿಕೊಳ್ಳುವ ಕರಾರಿನ ಮೇಲೆ ದೊಡ್ಡ ಮೊತ್ತದ ವೃತ್ತಿಗೆ ರಾಜೀನಾಮೆ ನೀಡಿ ಹೊರಬಂದೆವು. ಆ ಕ್ಷಣಕ್ಕೆ ಅದೊಂದು ಬಿಡುಗಡೆಯಾಗಿ ಕಂಡಿದ್ದಂತೂ ಸತ್ಯ.

ಅಲ್ಲಿಂದ ಮುಂದೆ ನಮ್ಮ ಪ್ರಾಜೆಕ್ಟಿಗೆಂದು ವಿಡಿಯೊ ಕ್ಯಾಮರಾ ಹೆಗಲಿಗೇರಿಸಿಕೊಂಡು ಊರೂರು ತಿರುಗುವುದು, ಗಲ್ಲಿಗಳಲ್ಲಿ ಅಲೆಯುವುದು, ಅವುಗಳೆಲ್ಲವನ್ನು ವ್ಯವಸ್ಥಿತವಾಗಿ ಜೋಡಿಸುವುದು ನಮ್ಮ ದೈನಂದಿನ ಚಟುವಟಿಕೆಯ ಭಾಗವೇ ಆಗಿಹೋಯಿತು. ಕೆಲವೊಮ್ಮೆ ಲೋರೆ ಹೇಳುತ್ತಿದ್ದ, “ಆಗ ದಿನಕ್ಕೆ ಹತ್ತುಗಂಟೆ ಕೆಲಸ ಮಾಡುವುದೆಂದರೆ ಕತ್ತೆ ದುಡಿತ ಅನಿಸುತ್ತಿತ್ತು ನೋಡು. ಆದರೆ ಈಗ ದಿನಕ್ಕೆ ಹದಿನೆಂಟು ಗಂಟೆ, ಕೆಲವೊಮ್ಮೆ ಅದಕ್ಕೂ ಹೆಚ್ಚು ಕೆಲಸ ಮಾಡಿದರೂ ಏನೇನೂ ಕೆಲಸವಾಗಲಿಲ್ಲವೆಂದು ಹಳಹಳಿಸುತ್ತೇವೆ.” ಅವನು ಹೇಳುವಾಗ ನನಗೂ ಹೌದಲ್ಲ ಅನಿಸುತ್ತಿತ್ತು. ನಮ್ಮ ಆಸಕ್ತಿಯೇ ವೃತ್ತಿಯಾದಾಗ ಸಮಯವೆಂಬುದೊಂದು ಅಳತೆಗೋಲೇ ಆಗಲಾರದೇನೊ?

ನಾವು ನಮ್ಮ ಅಧ್ಯಯನಕ್ಕೆಂದು ಆರಿಸಿಕೊಂಡ ವಿಷಯ ತುಂಬಾ ಆಸಕ್ತಿದಾಯಕವಾಗಿತ್ತು. ಹಲವು ನಿರ್ಬಂಧಗಳ ನಡುವೆಯೂ ನಮ್ಮ ಹೆಣ್ಣುಗಳ ಲೋಕ ಕಂಡುಕೊಂಡ ಬಿಡುಗಡೆಯ ಕಿರುದಾರಿಗಳ ಬಗ್ಗೆ ಅಧ್ಯಯನ ಮಾಡಬೇಕಿತ್ತು. ಅದಕ್ಕಾಗಿ ಊರೂರು ಅಲೆಯುತ್ತ, ಅನೇಕ ದಾಖಲೆಗಳನ್ನು ಕಲೆಹಾಕುತ್ತಾ ತಿರುಗುತ್ತಿದ್ದೆವು. ಲೋರೆಗಂತೂ ಇಲ್ಲಿಯ ಹೆಣ್ಣುಗಳ ಪ್ರತಿಯೊಂದು ನಡೆಯೂ ಅದೆಷ್ಟು ಅಚ್ಚರಿಯನ್ನುಂಟುಮಾಡುತ್ತಿತ್ತೆಂದರೆ ತಕ್ಷಣ ಅವುಗಳೆಲ್ಲವನ್ನೂ ದಾಖಲಿಸಿಕೊಂಡು ಅವುಗಳ ಚಿತ್ರೀಕರಣಕ್ಕೆಂದು ಕ್ಯಾಮರಾ ಹೆಗಲಿಗೇರಿಸಿಯೇಬಿಡುತ್ತಿದ್ದ. ನಮ್ಮ ಮನೆಗಳಲ್ಲಿ ನೆಂಟರು ಬಂದಾಗ ಬೇಕೆಂದು ಅಮ್ಮ ಅಟ್ಟದ ಮೇಲೆ ಒಂದಿಷ್ಟು ಚಾಪುಡಿ, ಸಕ್ಕರೆ, ಬೆಲ್ಲ ಮುಂತಾದ ಅಮೂಲ್ಯ ವಸ್ತುಗಳನ್ನು ಹಳೆಯ ಹಾಸಿಗೆಯಡಿಯಲ್ಲಿ ಬಚ್ಚಿಡುತ್ತಿದ್ದರು ಎಂದೋ, ಅಪ್ಪನ ಕಣ್ಣುತಪ್ಪಿಸಿ ತನ್ನ